ವಿಷಯ:- ಬೀಳಗಿ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ.

289 (1839) **ಶ್ರೀ ಜಿ.ಟಿ. ಪಾಟೀಲ್ (ಬೀಳಗಿ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬೀಳಗಿ ತಾಲ್ಲೂಕಿನಲ್ಲಿ ಸ್ಲಂ ಕೊಳಚೆ ಪ್ರದೇಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇನ್ನೂವರೆಗೆ ಈ ತಾಲ್ಲೂಕನ್ನು ಸ್ಲಂ ಕ್ಲಿಯರೆನ್ಸ್ ಬೋರ್ಡಿನ ವ್ಯಾಪ್ತಿಯಲ್ಲಿ ತರದೇ ಇರುವ ಕಾರಣವೇನು?

ಇ) 1996-97ನೇ ಸಾಲಿನಲ್ಲಿ ಈ ಬೋರ್ಡಿನ ವ್ಯಾಪ್ತಿಯಲ್ಲಿ ಸೇರಿಸಿಕೊಂಡು ಇಲ್ಲಿಯೂ ಸಹಿತ ಕೆಲಸ ಪ್ರಾರಂಭಿಸಲು ಆದೇಶ ಹೊರಡಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನ) 1973ರ ಕಾಯ್ದೆ ಅನುಸಾರ ಇದುವರೆವಿಗೂ ಮಹಾನಗರಪಾಲಿಕೆ: ನಗರಸಭೆ: ಪುರಸಭೆಗಳು ಇರುವಲ್ಲಿ ಮಾತ್ರ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆ ಇರುತ್ತದೆ. ಬೀಳಗಿ ಪಟ್ಟಣ ಪಂಚಾಯಿತಿಯು ಇತ್ತೀಚೆಗಷ್ಟೇ ಅಸ್ತಿತ್ವಕ್ಕೆ ಬಂದಿರುವ ಕಾರಣ ಕೊಳಚೆ ಪ್ರದೇಶಗಳು ಇರುವ ಬಗ್ಗೆ ಪಟ್ಟಣ ಪಂಚಾಯಿತಿಯಿಂದಾಗಲೀ ಅಥವಾ ಸ್ಥಳೀಯ ಕೊಳಚೆ ಪ್ರದೇಶಗಳ ನಿವಾಸಿಗಳಿಂದಾಗಲೀ ಮಂಡಳಿಗೆ ಮಾಹಿತಿ ದೊರೆತಿರುವುದಿಲ್ಲ. ಹೀಗಾಗಿ ಬೀಳಗಿ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶಗಳಿರುವುದು ಮಂಡಳಿಯ ಗಮನಕ್ಕೆ ಬಂದಿರುವುದಿಲ್ಲ.

ಆ) ಮೇಲೆ ಉತ್ತರಿಸಿರುವ ಹಿನ್ನಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬೀಳಗಿ ಪಟ್ಟಣವನ್ನು ಇತ್ತೀಚೆಗಷ್ಟೇ ದಿನಾಂಕ 19-6-96ರಲ್ಲಿ ಪಟ್ಟಣ ಪಂಚಾಯಿತಿಯೆಂದು ಘೋಷಿಸಲಾಗಿದೆ. ಪಟ್ಟಣ ಪಂಚಾಯಿತಿಯಿಂದಾಗಲೀ ಅಥವಾ ಸ್ಥಳೀಯ ಕೊಳಚೆ ನಿವಾಸಿಗಳಿಂದಾಗಲೀ ಅಲ್ಲಿ ಕೊಳಚೆ ಪ್ರದೇಶಗಳಿರುವ ಬಗ್ಗೆ ಮಾಹಿತಿ ಇದುವರೆವಿಗೂ ಬಂದಿರುವುದಿಲ್ಲವೆಂದು ಬಿಜಾಪುರ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವರದಿ ಮಾಡಿರುತ್ತಾರೆ. ಕೂಡಲೇ ಮಂಡಳಿಯ ಅಧಿಕಾರಿಗಳಿಂದ ಕೊಳಚೆ ಪ್ರದೇಶಗಳ ಬಗ್ಗೆ ಸಮೀಕ್ಷೆ ನಡೆಸಲಾಗುವುದು. ಕೊಳಚೆಗೇರಿಗಳು ಇದ್ದಲ್ಲಿ ಅವುಗಳನ್ನು ಕಾಯ್ದೆಯಡಿಯಲ್ಲಿ ಘೋಷಿಸಿ ಅಂತಹ ಕೊಳಚೆಗೇರಿಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಬೀಳಗಿ ತಾಲ್ಲೂಕು ಕೇಂದ್ರವಾಗಿದ್ದು ಇದನ್ನು 19-6-96ರಲ್ಲಿ ಪಟ್ಟಣ ಪಂಚಾಯಿತಿ ಎಂದು ಘೋಷಿಸಲಾಗಿದೆ ಎಂದು ಹೇಳಿದ್ದಾರೆ. ಇದು ನಿಜವಾಗಿದ್ದರೆ ಈ ಮಧ್ಯದಲ್ಲಿ ಒಂದು 5 ವರ್ಷ ಬಿಟ್ಟರೆ ಸಂಪೂರ್ಣವಾಗಿ ಆದು ಬೀಳಗಿ ತಾಲ್ಲೂಕು ಕೇಂದ್ರ ಮುನಿಸಿಪಾಲಿಟಿಯಾಗಿ ಕೆಲಸ ಮಾಡುತ್ತಿತ್ತು. ಇಲ್ಲಿಯವರೆಗೂ ಅಲ್ಲಿ ಕೊಳಚೇ ಪ್ರದೇಶ ಇದೆ

ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇನ್ನೊಂದು ಉತ್ತರದಲ್ಲಿ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಯಾವುದೇ ಟೌನ್ ಪಂಚಾಯಿತಿಯಿಂದ ಆಗಲಿ, ಕೊಳಚೇ ಪ್ರದೇಶದ ನಿವಾಸಿಗಳಿಂದಾಗಲಿ ಯಾವುದೇ ಬೇಡಿಕೆ ಬಂದಿಲ್ಲ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಇದು ಸಂಪೂರ್ಣವಾಗಿ ತಪ್ಪು ಮಾಹಿತಿ ಎಂದು ನಾನು ಹೇಳಬಯಸುತ್ತೇನೆ. ನಾನು ಒಬ್ಬ ಶಾಸಕನಾಗಿ ಸಂಬಂಧಿಸಿದಂತಹ ಎಕ್ಸಿಕ್ಯೂಟೀವ್ ಇಂಜನೀಯರ್‌ರವರಿಗೆ ಬೀಳಗಿ ತಾಲ್ಲೂಕನ್ನು ಸ್ಲಂ ಬೋರ್ಡಿನಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನು ಕೇಳಿಕೊಂಡಿದ್ದೆ. ಇದು ತಪ್ಪು ಮಾಹಿತಿ ಆದ್ದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಇದೇ ಸಾಲಿನಲ್ಲಿ ಈ ಬೀಳಗಿ ಪಟ್ಟಣವನ್ನು ತಮ್ಮ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನಲ್ಲಿ ಅಳವಡಿಸಿಕೊಂಡು ಕ್ರಮ ಕೈಗೊಳ್ಳುವರೇ ಎಂದು ನಾನು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಬೀಳಗಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿತ್ತು. ಈಗ 23-7-96ರಲ್ಲಿ ಇದನ್ನು ಪಟ್ಟಣ ಪಂಚಾಯತಿ ಆಗಿ ಪರಿವರ್ತನೆ ಮಾಡಿದ್ದಾರೆ. ಸರ್ಕಾರಿ ಆದೇಶದ ಹಿನ್ನಲೆಯಲ್ಲಿ ಮಂಡಲಿ ಅಧಿಕಾರಿಗಳಿಂದ ಕೊಳಚೆ ಪ್ರದೇಶಗಳ ಬಗ್ಗೆ ವರದಿ ತರಿಸಿ ಇದನ್ನು ಈ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ, ಆದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ಕಬ್ಬನ್ ಉದ್ಯಾನವನದಲ್ಲಿ ಪ್ರತಿಭಟನೆ ನಿಷೇಧ.

190 (2135) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಬ್ಬನ್ ಉದ್ಯಾನವನದಲ್ಲಿ ಪ್ರತಿಭಟನೆ, ಪ್ರದರ್ಶನ, ಧರಣಿ ನಡೆಸುವುದನ್ನು ನಿಷೇಧಿಸಬೇಕೆಂಬ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ನಿಷೇಧ ಜಾರಿಗೆ ತರಲು ಕಾರಣಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಇತ್ತೀಚಿನ ಹೈಕೋರ್ಟಿನ ಮದ್ಯಾಂತರ ತೀರ್ಪಿನಲ್ಲಿ ರಾಜ್ಯ ಸರ್ಕಾರ ಮತ್ತು ಅದರ ಅಥಾರಿಟಿಗಳಿಗೆ ಮುಂದಿನ ಆದೇಶದವರೆಗೆ ಕಬ್ಬನ್ ಉದ್ಯಾನವನದಲ್ಲಿ ಯಾವುದೇ ಪ್ರತಿಭಟನೆ ಪ್ರದರ್ಶನ, ಧರಣಿ, ರ್‍ಯಾಲಿಗಳಿಗೆ ಅವಕಾಶ ನೀಡಬಾರದೆಂದು ಆದೇಶಿಸಲಾಗಿದೆ. ಈ ಆದೇಶವನ್ನು ಈಗ ಪರಿಶೀಲಿಸಲಾಗುತ್ತಿದೆ. ಹೈಕೋರ್ಟಿನ ಅಂತಿಮ ತೀರ್ಮಾನವನ್ನು ಕಾಯಲಾಗುತ್ತಿದೆ.

ಆ) ಹೈಕೋರ್ಟ್ ಆದೇಶದಂತೆ ನಿಷೇದವನ್ನು ಜಾರಿಗೆ ತರಲಾಗಿದೆ.

1) ಕಬ್ಬನ್ ಉದ್ಯಾನವನದ ವೈಭವತೆಯನ್ನು ಉಳಿಸಿ ಸಸ್ಯ ಸಂಪತ್ತನ್ನು ಸಂರಕ್ಷಿಸುವ ಸಲುವಾಗಿ.
2) ಉದ್ಯಾನವನದ ಲಾನ್, ಹೂಪಾತಿ, ಗುಲಾಬಿ ಮತ್ತು ಇತರೇ ಹೂವಿನ ತೋಟವನ್ನು ರಕ್ಷಿಸುವ ಸಲುವಾಗಿ.